ಈ ಆಪಾದಿತರು ಅಲ್ಲದಿದ್ದರೆ ಇನ್ನೊಬ್ಬರನ್ನು ಎತ್ತಂಗಡಿ ಮಾಡುವಂತಹ ಸಾಧ್ಯತೆ ಇರುವುದರಿಂದ ತಾವು ದಯವಿಟ್ಟು ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಯಾರು ಗಾಯಾಳುಗಳು ಇದ್ದಾರೆ, ಸನ್ಮಾನ್ಯ ಸಚಿವರೇ ಅವರಿಗೆ ಪರಿಹಾರವನ್ನು ಕೊಡುವಂತಹದನ್ನು ಮಾಡಬೇಕು. ಪರಿಹಾರ ಘೋಷಣೆ ಮಾಡಬೇಕು ಎನ್ನತಕ್ಕ ವಿನಂತಿಯನ್ನು ಕೂಡ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಂತಹ ಕೇಸಸ್‌ನಲ್ಲಿ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ತಮಗೆ ಗೊತ್ತಿದೆ. ಯಾವ ಕೇಸಸ್‌ನಲ್ಲಿ ಕ್ರಿಮಿನಲ್ ಕ್ಲಾಸಸ್ ಅಥವಾ ಯಾವುದಾದರೂ ಒಂದು ಘಟನೆ ಹಿನ್ನೆಲೆ ಏನು ಇದೆ ಎನ್ನತಕ್ಕದ್ದನ್ನು ಹೇಳುವುದಕ್ಕೆ ಆಗುವುದಿಲ್ಲ. ಬೇಕಾಗಿ ಒಬ್ಬರು ಅಕ್ಯೂಸ್ಡ್ ಮುಸ್ಲಿಮ್ ಅಥವಾ ವಿಕ್ಟಿಮ್ ಹಿಂದೂ ಆದ ತಕ್ಷಣವೇ ನಾವು ಪರಿಹಾರ ಕೊಡಬೇಕು ಎನ್ನುವುದು ಬರುವುದಿಲ್ಲ. ಈಗಾಗಲೇ ಎನ್‌ಕ್ವೈರಿ ನಡೆದಿದೆ. ಎನ್‌ಕ್ವೈರಿ ಪ್ರಕಾರ ಏನು ಕ್ರಮವನ್ನು ಜರುಗಿಸಬೇಕೋ ಆ ಕ್ರಮವನ್ನು ಜರುಗಿಸುತ್ತೇವೆ. ಮತ್ತು ಗಾಯಾಳುಗಳಿಗೆ ಸರ್ಕಾರದವತಿಯಿಂದ ಏನಾದರೂ ಔಷಧೋಪಚಾರ ಆಗಬೇಕಾಗಿದ್ದರೆ ನಾನು ಸಂಬಂಧಪಟ್ಟಂತಹ ಮಂತ್ರಿಗಳಿಗೆ ಹೇಳುತ್ತೇನೆ. ಅಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡತಕ್ಕದ್ದು ಅದು ಸಹನೀಯ.

ಶ್ರೀ ಎನ್. ಯೋಗೀಶ್ ಭಟ್: ಲಕ್ಷಗಟ್ಟಲೆ ಬಿಲ್ ಆಗಿದೆ. ಅದಕ್ಕೆ ಪರಿಹಾರವನ್ನು ಜಿಲ್ಲಾಧಿಕಾರಿಗಳಿಂದ ಪರಿಹಾರವನ್ನು ಕೊಡಿಸುವಂತಹ ವ್ಯವಸ್ಥೆ ಆದರೂ ದಯವಿಟ್ಟು ಮಾಡಿ. ಬೇರೆ ಕಡೆಯಲ್ಲಿ ಇಂತಹ ಗಲಾಟೆ ಸಂದರ್ಭದಲ್ಲಿ ಪರಿಹಾರ ಕೊಟ್ಟಿದ್ದು ಇದೆ. ಆದರೆ ತಾವು ಇಲ್ಲಿ ಏಕೆ ಪರಿಹಾರ ಕೊಡುತ್ತಿಲ್ಲ ಎಂದು ಹೇಳುವಂತಹದು ನನ್ನ ಕಳಕಳಿ. ತಾವು ದಯವಿಟ್ಟು ಆದೇಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆದೇಶವನ್ನು ಯಾರಿಗೆ ಕೊಡಲಿ ನಿಮಗೇ ಗೊತ್ತಿದೆ. ಇದು ವೈಯಕ್ತಿಕವಾಗಿ ನಡೆದಿರತಕ್ಕದ್ದು. ಯಾವುದೋ ಒಂದು ಕಾರಣಕ್ಕಾಗಿ ಜಗಳಗಳು ನಡೆಯುತ್ತವೆ. ಈಗ ಅದರಲ್ಲಿ ಹೇಳಿದ ಹಾಗೆ ಎಲೆಕ್ಟ್ರಿಕಲ್ ಬಿಲ್ ಕೊಡಲಿಲ್ಲ ಎಂದು ಹೇಳಿ ಇವರಿಗೂ ಇವರಿಗೂ ಮಾತಿನ ಚಕಮಕಿ ನಡೆಯಿತು, ಹೊಡೆದಾಟ ಆಯಿತು. ಅದಕ್ಕೆ ಪರಿಹಾರ ಕೊಡಿ ಎಂದರೆ ಹೇಗೆ?

ಶ್ರೀ ಎನ್. ಯೋಗೀಶ್ ಭಟ್: ಇದು ವೈಯಕ್ತಿಕ ಜಗಳ ಅಲ್ಲ. ಇಲ್ಲಿ ದುರುದ್ದೇಶ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪೊಲೀಸ್ ಎನ್‌ಕ್ವೈರಿ ವಿಚಾರ ಬರುತ್ತದಲ್ಲಾ ಏನು ದುರುದ್ದೇಶ ಇದೆ ನೋಡೋಣ. ಪೊಲೀಸ್ ಎನ್‌ಕ್ವೈರಿಯಲ್ಲಿ ಛಾರ್ಜ್ ಶೀಟ್ ಹಾಕಿದ್ದಾರೆ. ಅರೆಸ್ಟ್ ಮಾಡಿದ್ದಾರೆ. ಮೂವರು ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇದ್ದಾರೆ. ನೋಡೋಣ.

6.10 ಪಿ.ಎಂ

ವಿಷಯ: (vii) ಆಲಮಟ್ಟಿ ಅಣೆಕಟ್ಟಿನ ಮುಳುಗಡೆಯಾಗಿರುವ ರೈತರ ಜಮೀನಿಗೆ ಪರಿಹಾರ ಹಣದ ಬಿಡುಗಡೆ

+ ಶ್ರೀ ಪಿ.ಹೆಚ್. ಪೂಜಾರ್(ಬಾಗಲಕೋಟೆ): ಮಾನ್ಯ ಛೇರ್ಮನ್‌ರೆ, ಆಲಮಟ್ಟಿ ಅಣೆಕಟ್ಟಿನ ವಿಚಾರದಲ್ಲಿ ಸರ್ಕಾರ ಒಂದು ವಿಷಯವನ್ನು [illegible] ಪಾಲಿಸ

ನೀರನ್ನು ಬಳಸಿಕೊಳ್ಳಲು 519.6 ಎಫ್.ಆರ್.ಎಲ್. ವರೆಗೆ ನೀರನ್ನು ಹಿಡಿದಿಟ್ಟಿದೆ ಎಂಬ ತೀರ್ಮಾನವನ್ನು ಪ್ರಕಟಿಸಿದೆ. ಮಾನ್ಯ ಮುಖ್ಯಮಂತ್ರಿಯವರು ಈ ವಿಷಯವನ್ನು ಮೇಲಿಂದ ಮೇಲೆ ಘೋಷಿಸುತ್ತಿದ್ದು, ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರೂ ಕೂಡ ಈ ಕುರಿತು ಸದನದಲ್ಲಿ ತಿಳಿಸಿದ್ದಾರೆ. 519.6 ಮೀಟರ್‌ಗಳವರೆಗೆ ಆಣೆಕಟ್ಟನ್ನು ಎತ್ತರಿಸಿದ ಹಿನ್ನೆಲೆಯಲ್ಲಿ ಸುಮಾರು ಮೂವತ್ತು ಸಾವಿರ ಎಕರೆಗಿಂತಲೂ ಹೆಚ್ಚಿಗೆ ಜಮೀನು ಮುಳುಗಡೆಯಾಗಲಿದ್ದು, ಮುಳುಗಡೆಯಾಗುವ ಜಮೀನಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಇವೊತ್ತಿನವರೆವಿಗೂ ಪರಿಹಾರ ಧನ ವಿತರಣೆಯಾಗಿರುವುದಿಲ್ಲ. ಇದಕ್ಕೆ ಕಾರಣವಿದೆ. 1998ರಲ್ಲಿ ಶ್ರೀಮಾನ್ ಜೆ.ಹೆಚ್. ಪಟೇಲ್‌ರವರ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ನೀರಾವರಿ ಜಮೀನಿಗೆ ಇಂತಿಷ್ಟು, ಒಣ ಬೇಸಾಯ ಜಮೀನಿಗೆ ಇಂತಿಷ್ಟು ಮತ್ತು ಎರಡು ಬೆಳೆಗಳನ್ನು ಬೆಳೆಯುವ ಜಮೀನಿಗೆ ಇಂತಿಷ್ಟು ಪರಿಹಾರ ಧನ ವಿತರಿಸಬೇಕೆಂದು ತೀರ್ಮಾನ ಕೈಗೊಂಡು ಅದೇ ರೀತಿಯಲ್ಲಿ ಪರಿಹಾರ ಧನ ವಿತರಿಸುತ್ತಾ ಬಂದಿದ್ದರು. ಆದರೆ, ಈಗ ವಿತರಿಸಲಾಗುತ್ತಿರುವ ಪರಿಹಾರ ಧನದಲ್ಲಿ ಪರಿಷ್ಕರಣೆಯಾಗಬೇಕೆಂದು ರೈತರಿಂದ ಒತ್ತಾಯ ಬಂದಂಥ ಸಂದರ್ಭದಲ್ಲಿ ಸರ್ಕಾರ ಆದನ್ನು ಒಪ್ಪಿಕೊಂಡು ಬೆಳಗಾಂ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ೮ ಭಾಗದ ಸಂಸತ್ ಸದಸ್ಯರು, ಶಾಸಕರು, ಜಿಲ್ಲಾಧಿಕಾರಿಗಳು, ಪೆನರ್ ವಸತಿಯ ಮಹಾ ವ್ಯವಸ್ಥಾಪಕರು, ಕಾನೂನು ಕೋಶದ ಮುಖ್ಯಸ್ಥರು, ಕೃಷಿ ಇಲಾಖೆಯ ಜಂಟಿ ಅಧಿಕಾರಿಗಳು ಹಾಗೂ ಜಮೀನು ಮುಳುಗಡೆ ಪ್ರದೇಶದ ಪ್ರಮುಖರನ್ನು ಒಳಗೊಂಡಂತೆ ಒಂದು ಸಮಿತಿ ರಚಿಸಿ ಬೆಲೆ ಪರಿಷ್ಕರಿಸುವುದಕ್ಕೆ ಸರ್ಕಾರ ಆದೇಶಿಸಿತ್ತು. ಸದರಿ ಸಮಿತಿಯು ಬೆಳಗಾಂನಲ್ಲಿ ಮೂರು ಸಲ ಹಾಗೂ ಬೆಂಗಳೂರಿನಲ್ಲಿ ಮೂರು ಸಲ ಸಭೆ ನಡೆಸಿ ತೀರ್ಮಾನ ಕೈಗೊಂಡಿದ್ದು, ತೀರ್ಮಾನದ ಪ್ರತಿಯನ್ನು ಸರ್ಕಾರ ಕಂದಾಯ ಇಲಾಖೆಗೆ ಕಳುಹಿಸಲಾಗಿದೆಯೋ? ಕಾನೂನು ಇಲಾಖೆಗೆ ಕಳುಹಿಸಲಾಗಿದೆಯೋ ಅಥವಾ ನೀರಾವರಿ ಇಲಾಖೆಗೆ ಕಳುಹಿಸಲಾಗಿದೆಯೋ ಗೊತ್ತಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸೆಕ್ಷನ್ 4 (1) & 6 (1)ರ ಅಧಿಸೂಚನೆಯ ಪ್ರಕಾರ ಭೂಸ್ವಾಧೀನ ಪ್ರಕ್ರಿಯೆಯಡಿ ಸುಮಾರು ಒಂದು ವರ್ಷದಿಂದ ಪರಿಹಾರ ಧನಕ್ಕಾಗಿ ರೈತರು ಕಾಯುತ್ತಿದ್ದಾರೆ. ಇದೇ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಆಣೆಕಟ್ಟೆಯಲ್ಲಿ ನೀರು ನಿಲ್ಲಿಸುವಂಥ ಪ್ರಕ್ರಿಯೆಯುಂಟಾದರೆ ಸುಮಾರು ಮೂವತ್ತು ಸಾವಿರ ಎಕರೆಗಳಿಗಿಂತಲೂ ಅಧಿಕ ಜಮೀನು ನೀರಿನಲ್ಲಿ ಮುಳುಗಡೆಯಾಗುತ್ತದೆಂಬ ಭಯದಲ್ಲಿ ಅಲ್ಲಿನ ಜನರು ಚಿಂತಾಕ್ರಾಂತರಾಗಿದ್ದಾರೆ. ಆದುದರಿಂದ, ತಕ್ಷಣ ಈ ಕುರಿತು ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ, ಭೂಸ್ವಾಧೀನ ಕಾಯ್ದೆಯಡಿ ಸದರಿ ಪ್ರಕ್ರಿಯೆ ವಿಷಿಯೇಟ್ ಆಗುತ್ತದೆಂಬ ಭಯ ಆ ಭಾಗದ ಜನರಲ್ಲಿ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾ ನದಿಗೆ ಅಡ್ಡಲಾಗಿ ಕೊರ್ತಿ-ಕೊಲ್ಲಾರದ ಬಳಿ ನಿರ್ಮಿಸಿರುವ ಸೇತುವೆಯನ್ನು ಉದ್ಘಾಟಿಸಲು ಬಾಗಲಕೋಟೆ ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ಸಹ ಭರವಸೆ ಕೊಟ್ಟಿದ್ದಾರೆ. ಬೆಲೆ ಪರಿಷ್ಕರಣೆ ಸಮಿತಿಯು ಏನು ವರದಿ ಸಲ್ಲಿಸುತ್ತದೆ, ಅದನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವುದಾಗಿ ತಿಳಿಸಿದ್ದಾರೆ. ಬೆಲೆ ಪರಿಷ್ಕರಣೆಯಲ್ಲಿ ಶೇಕಡ 36ರಷ್ಟು ಹೆಚ್ಚಿಸಬೇಕೆನ್ನುವ ತೀರ್ಮಾನವನ್ನು ಸಮಿತಿಯು ಕೈಗೊಂಡು ವರದಿ ಸಲ್ಲಿಸಿರುವ ಸಂದರ್ಭದಲ್ಲಿ, ಎಗಡೂವರೆ

ತಿಂಗಳಾಗಿ ಗಡುವು ಮೀರುತ್ತಾ ಬಂದಿರುವಾಗ ಇವೊತ್ತಿನವರೆವಿಗೂ ಸರ್ಕಾರ ಏನೂ ತೀರ್ಮಾನ ಕೈಗೊಂಡಿಲ್ಲದಿರುವುದರಿಂದ ತಕ್ಷಣ ಸರ್ಕಾರ ತೀರ್ಮಾನ ತೆಗೆದುಕೊಂಡು ಪ್ರೊಸಿಡಿಂಗ್ಸ್ ವಿಷಿಯೇಟ್ ಆಗದಂತೆ ನೋಡಿಕೊಳ್ಳಬೇಕು. ಇವೊತ್ತು ಪರಿಹಾರ ಧನವನ್ನು ಸರಿಯಾಗಿ ವಿತರಿಸಿಲ್ಲದಿರುವುದರಿಂದ ಸೂಕ್ತ ಪರಿಹಾರ ಧನ ಒದಗಿಸಿಕೊಡಬೇಕೆಂದು ರೈತರು ಚಿಂತಾಕ್ರಾಂತರಾಗಿ ಕುಳಿತಿದ್ದು, ತಮ್ಮ ಜಮೀನಿಗೆ ಸೂಕ್ತ ಕಿಮ್ಮತ್ತು ಕೊಡಬೇಕೆಂದು ಬೇಡಿಕೆಯಿಟ್ಟಿರುವುದರಿಂದ ಸರ್ಕಾರ ತಕ್ಷಣ ಪರದಿಯನ್ನು ಕಾರ್ಯರೂಪಕ್ಕೆ ತರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಗೃಹ ಸಚಿವರು): ಮಾನ್ಯ ಛೇರ್ಮನ್‌ರೆ, ಈ ಕುರಿತ ಸಂಪೂರ್ಣ ವಿವರಗಳು ಕಂದಾಯ ಮಂತ್ರಿಗಳ ಬಳಿ ಇರುತ್ತದೆ. ಏಕೆಂದರೆ ಪುನರ್ವಸತಿ ಕಾರ್ಯಕ್ರಮವನ್ನು ಆ ಇಲಾಖೆಯವರೇ ಹಮ್ಮಿಕೊಳ್ಳುವುದರಿಂದ, ಮಾನ್ಯ ಕಂದಾಯ ಮಂತ್ರಿಗಳಿಗೆ ಈ ಕುರಿತು ಮಾಹಿತಿ ಕಳುಹಿಸಿಕೊಡುತ್ತೇನೆ. ಮಾನ್ಯ ಸದಸ್ಯರಾದ ಪೂಜಾರ್‌ರವರು ಮಾತನಾಡುತ್ತಾ ಪ್ರೊಸಿಡಿಂಗ್ಸ್ ವಿಷಿಯೇಟ್ ಆಗುತ್ತದೆಂದು ಹೇಳಿರುವುದರಿಂದ ಅಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಹೇಗೆ ನಡೆಯುತ್ತಿದೆ, ಯಾವ್ಯಾವ ರೀತಿಯಲ್ಲಿ ಕನ್ಷೆಂಟ್ ಕೊಡುತ್ತಾರೆ, ಯಾರ್ಯಾರು ಪರಿಹಾರ ಧನ ಪಡೆಯುತ್ತಿದ್ದಾರೆ, ಹೇಗೆ ಪರಿಹಾರ ಧನವನ್ನು ಹಂಚುತ್ತಿದ್ದಾರೆ, ವಾಸ್ತವವಾಗಿ ಯಾವ್ಯಾವ, ಎಷ್ಟೆಷ್ಟು ಜಮೀನು ಮುಳುಗುತ್ತದೆ, ಮುಳುಗುವುದಿಲ್ಲವೆಂಬುದು ತಮಗೆ ಗೊತ್ತಿರುವುದರಿಂದ ಈ ಕುರಿತು ನಾನು ಪರಿಶೀಲನೆ ಮಾಡುತ್ತೇನೆಂದರೆ ಸರಿಹೋಗುವುದಿಲ್ಲ. ಈ ಬಗ್ಗೆ ಕಂದಾಯ ಮಂತ್ರಿಗಳ ಹತ್ತಿರ ಮಾಹಿತಿ ಇರುತ್ತದೆ. ಇಲ್ಲವೇ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾಗಿರುವ ಹೆಚ್.ಕೆ. ಪಾಟೀಲ್‌ರವರು ಉತ್ತರ ಕರ್ನಾಟಕ ಭಾಗದವರಾಗಿರುವುದರಿಂದ ಅವರಿಗೂ ಈ ವಿಷಯದಲ್ಲಿ ನಿಮ್ಮಷ್ಟೇ ಕಳಕಳಿ, ಆಸಕ್ತಿ ಇರುವುದರಿಂದ ಭೂ ಸ್ವಾಧೀನದ ವೆಚ್ಚ ಜಾಸ್ತಿಯಾಗುತ್ತದೋ ಇಲ್ಲವೇ ಯೋಜನಾ ವೆಚ್ಚವೇ ಜಾಸ್ತಿಯಾಗುತ್ತದೋ ನೋಡೋಣ. ಇದರ ಬಗ್ಗೆ ನಾನು ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರ ಹಾಗೂ ಕಂದಾಯ ಸಚಿವರ ಗಮನಕ್ಕೆ ಖಂಡಿತವಾಗಿಯೂ ತರುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್: ತಾವು ಹೇಳುವುದು ನನಗೆ ಅರ್ಥವಾಗುತ್ತದೆ. ತಾವು ಸಂಶಯದ ದೃಷ್ಟಿಯಿಂದ ಈ ಕುರಿತು ಹೇಳಬೇಡಿ. ಈಗಾಗಲೇ 4(1) 6(1) ಅಧಿಸೂಚನೆಯಾಗಿದ್ದು, ನೀರನ್ನು 519.6 ಎಫ್‌ಆರ್‌ಎಲ್‌ವರೆಗೆ ನಿಲ್ಲಿಸಿದರೆ ಸುಮಾರು ಮೂವತ್ತು ಸಾವಿರ ಎಕರೆಗಳಷ್ಟು ಜಮೀನು ಮುಳುಗುತ್ತಿಯಾಗುತ್ತದೆಂದು ತೀರ್ಮಾನವಾಗಿರುತ್ತದೆ. ಕಳೆದ ಎಡೂವರೆ ತಿಂಗಳುಗಳಿಂದಲೂ ಇದು ಪೆಂಡಿಂಗ್ ಇದ್ದು ಇನ್ನೂ ಪರಿಹಾರ ಧನ ವಿತರಿಸುವ ಕುರಿತು ತೀರ್ಮಾನವಾಗಿಲ್ಲ. ಪ್ರೊಸಿಡಿಂಗ್ಸ್ ವಿಷಿಯೇಟ್ ಆಗುವಂಥ ಸಂದರ್ಭವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ಕುರಿತು ತೀರ್ಮಾನ ಕೈಗೊಳ್ಳುವುದಕ್ಕೆ ನಾನು ಸಂಬಂಧಪಟ್ಟ ಮಂತ್ರಿಗಳಿಗೆ, ಕಂದಾಯ ಮಂತ್ರಿಗಳಿಗೆ ಖಂಡಿತವಾಗಿಯೂ ತಿಳಿಸುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಛೇರ್ಮನ್‌ರವರೆ, ಮಾನ್ಯ ಹಿರಿಯ ಸದಸ್ಯರಾಗಿರುವ ಕೆ.ಹೆಚ್. ಹನುಮೇಗೌಡರ ಆರೋಗ್ಯ ಸರಿಯಿಲ್ಲದಿರುವುದರಿಂದ ಹಾಗೂ